# ಭಾರತ ನಿಕ್ಷೇಪ ನಿಧಿ ಅಧಿನಿಯಮ, 1878

**16.11.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 35ನೇ ಸಂಪುಟದ 1ನೇ ಸಂಚಿಕೆಯಲ್ಲಿ 122 ರಿಂದ 126ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

## ವಿಷಯಾನುಕ್ರಮಣಿಕೆ


**ಪ್ರಾರಂಭಿಕ**

**ಪ್ರಕರಣಗಳು:**

1. ಚಿಕ್ಕ ಹೆಸರು
2. ಅಧಿನಿಯಮಿತಿಗಳ ನಿರಸನ
3. ಅರ್ಥವಿವರಣಾ ಖಂಡ

**ನಿಧಿಯು ಕಂಡುಬಂದ ಮೇಲೆ ಕಾರ್ಯವಿಧಾನ**

4. ನಿಧಿಯನ್ನು ಕಂಡವನಿಂದ ನೋಟೀಸು
5. ಹಾಜರಾಗಲು ಕ್ಲೇಮುದಾರರನ್ನು ಅಗತ್ಯಪಡಿಸುವ ಅಧಿಸೂಚನೆ
6. ಹಾಜರಾಗಲು ತಪ್ಪಿದರೆ ಹಕ್ಕನ್ನು ಕಳೆದುಕೊಳ್ಳುವುದು
7. ಕಲೆಕ್ಟರನು ವಿಚಾರಣೆ ಮಾಡಬೇಕಾದ ಮತ್ತು ನಿರ್ಧರಿಸಬೇಕಾದ ವಿಷಯಗಳು
8. ಆ ನಿಧಿಯನ್ನು ಕ್ಲೇಮುಮಾಡುವ ವ್ಯಕ್ತಿಗೆ ದಾವೆ ಹೂಡುವುದಕ್ಕಾಗಿ ಅವಕಾಶ ಮಾಡಿಕೊಡಬೇಕಾದ ಕಾಲ
9. ನಿಧಿಗೆ ಒಡೆಯನಿಲ್ಲವೆಂದು ಯಾವಾಗ ಘೋಷಿಸಬಹುದು
10. ಘೋಷಣೆಯ ತರುವಾಯದ ವ್ಯವಹರಣೆಗಳು
11. ಸ್ಥಳದ ಒಡೆಯನೆಂದು ಯಾರೇ ಇತರ ವ್ಯಕ್ತಿಯು ಕ್ಲೇಮು ಮಾಡದೆ ಇರುವಾಗ, ನಿಧಿಯನ್ನು ಕಂಡವನಿಗೆ ಕೊಡತಕ್ಕದ್ದು
12. ಅಂಥ ಒಬ್ಬನೇ ಒಬ್ಬ ವ್ಯಕ್ತಿಯು ಕ್ಲೇಮು ಮಾಡಿದಾಗ, ಮತ್ತು ಅವನ ಕ್ಲೇಮಿನ ಬಗ್ಗೆ ವಿವಾದವಿಲ್ಲದಿದ್ದಾಗ ನಿಧಿಯನ್ನು ಭಾಗ ಮಾಡುವುದು ಮತ್ತು ಭಾಗಗಳನ್ನು ಪಕ್ಷಕಾರರಿಗೆ ವಶಾವಣೆ ಮಾಡುವುದು
13. ಸ್ಥಳದ ಒಡೆತನದ ಬಗ್ಗೆ ವಿವಾದದ ಸಂದರ್ಭದಲ್ಲಿ, ವ್ಯವಹರಣೆಗಳನ್ನು ತಡೆಹಿಡಿಯುವುದು
14. ಅಂಥ ವಿವಾದದ ಇತ್ಯರ್ಥ
15. ಆ ತರುವಾಯ ವಿಭಜನೆ
16. ಸರ್ಕಾರದ ಪರವಾಗಿ ಆ ನಿಧಿಯನ್ನು ಆರ್ಜಿಸುವ ಅಧಿಕಾರ
17. ಕಲೆಕ್ಟರನ ತೀರ್ಮಾನವು ಅಂತಿಮವಾಗಿರುವುದು ಮತ್ತು ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ಅವನ ವಿರುದ್ಧ ಯಾವುದೇ ದಾವೆಯನ್ನು ಹೂಡಲು ಅವಕಾಶವಿಲ್ಲದಿರುವುದು
18. ಕಲೆಕ್ಟರನು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವುದು
19. ನಿಯಮ ರಚನಾಧಿಕಾರ

**ದಂಡನೆಗಳು**

20. ನೋಟೀಸನ್ನು ಕೊಡಲು ತಪ್ಪುವ ಕಂಡವನಿಗೆ ದಂಡನೆ, ಇತ್ಯಾದಿ
21. 20ನೇ ಪ್ರಕರಣದ ಮೇರೆಗಿನ ಅಪರಾಧವನ್ನು ದುಷ್ಪ್ರೇರಿಸುವ ಒಡೆಯನಿಗೆ ದಂಡನೆ

**ಅನುಸೂಚಿ**

# ಭಾರತ ನಿಕ್ಷೇಪ ನಿಧಿ ಅಧಿನಿಯಮ, 1878

(1878ರ ಅಧಿನಿಯಮ ಸಂಖ್ಯೆ 6)

[13ನೇ ಫೆಬ್ರವರಿ, 1878]

ನಿಕ್ಷೇಪ ನಿಧಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವ ಅಧಿನಿಯಮ.

**ಪ್ರಸ್ತಾವನೆ:**- ನಿಕ್ಷೇಪ ನಿಧಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ ಈ ಮೂಲಕ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:

## ಪ್ರಾರಂಭಿಕ

**1. ಚಿಕ್ಕ ಹೆಸರು.**- ಈ ಅಧಿನಿಯಮವನ್ನು ಭಾರತ ನಿಕ್ಷೇಪ ನಿಧಿ ಅಧಿನಿಯಮ, 1878 ಎಂದು ಕರೆಯತಕ್ಕದ್ದು.

**ವ್ಯಾಪ್ತಿ.**- ಇದು 1ನೇ ನವೆಂಬರ್ 1956ಕ್ಕೆ ನಿಕಟಪೂರ್ವದಲ್ಲಿ 'ಬಿ' ಭಾಗದ ರಾಜ್ಯಗಳಲ್ಲಿ ಒಳಗೊಂಡಿದ್ದಂಥ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. [ಅಧಿನಿಯಮಿತಿಗಳ ನಿರಸನ].**- ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1891 (1891ರ 12)ರ 2ನೇ ಪ್ರಕರಣ ಮತ್ತು 1ನೇ ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

**3. ಅರ್ಥವಿವರಣಾ ಖಂಡ.**- ಈ ಅಧಿನಿಯಮದಲ್ಲಿ,-

"ನಿಧಿ" ಎಂದರೆ ಭೂಮಿಯಲ್ಲಿ ಅಥವಾ ಅದಕ್ಕೆ ಲಗತ್ತಾದ ಯಾವುದೇ ವಸ್ತುವಿನಲ್ಲಿ ಗುಪ್ತವಾಗಿಟ್ಟ ಯಾವುದೇ ಮೌಲ್ಯದ ಯಾವುದೇ ವಸ್ತು.

"ಕಲೆಕ್ಟರ್" ಎಂದರೆ (1) ಜಿಲ್ಲೆಯ ಸ್ವತಂತ್ರ ಪ್ರಭಾರದಲ್ಲಿರುವ ಯಾವನೇ ರಾಜಸ್ವ ಅಧಿಕಾರಿ, ಮತ್ತು (2) ಈ ಅಧಿನಿಯಮದ ಮೇರೆಗೆ ಕಲೆಕ್ಟರನ ಪ್ರಕಾರ್ಯಗಳನ್ನು ನೆರವೇರಿಸಲು ರಾಜ್ಯ ಸರ್ಕಾರವು ನೇಮಕ ಮಾಡಿದ ಯಾರೇ ಅಧಿಕಾರಿ.

"ಒಡೆಯ" ಯಾರೇ ವ್ಯಕ್ತಿಯು, ಯಾವುದೇ ಭೂಮಿ ಅಥವಾ ಅದಕ್ಕೆ ಲಗತ್ತಾದ ವಸ್ತುವಿನ ವರ್ಗಾವಣೆಯ ಲಿಖಿತದಲ್ಲಿನ ಯಾವುದೇ ಕಾಯ್ದಿರಿಸುವಿಕೆಯ ಮೇರೆಗೆ ಅಂಥ ಭೂಮಿ ಅಥವಾ ವಸ್ತುವಿನಲ್ಲಿನ ನಿಧಿಗೆ ಹಕ್ಕುಳ್ಳವನಾಗಿರುವಾಗ ಅವನನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಭೂಮಿ ಅಥವಾ ವಸ್ತುವಿನ ಒಡೆಯನೆಂಬುದಾಗಿ ಭಾವಿಸತಕ್ಕದ್ದು.

## ನಿಧಿಯು ಕಂಡುಬಂದ ಮೇಲೆ ಕಾರ್ಯವಿಧಾನ

**4. ನಿಧಿಯನ್ನು ಕಂಡವನಿಂದ ನೋಟೀಸು.**- ಹತ್ತು ರೂಪಾಯಿ ಮೊಬಲಗು ಅಥವಾ ಅದರ ಮೌಲ್ಯವನ್ನು ಮೀರುವ ಯಾವುದೇ ನಿಧಿಯು ಕಂಡುಬಂದಾಗಲೆಲ್ಲ ಅದನ್ನು ಕಂಡವನು ಕಾರ್ಯಸಾಧ್ಯವಾದಷ್ಟು ಬೇಗ ಕಲೆಕ್ಟರನಿಗೆ,-

(ಎ) ಅಂಥ ನಿಧಿಯ ಸ್ವರೂಪ ಮತ್ತು ಮೊಬಲಗು ಅಥವಾ ಅಂದಾಜು ಮೌಲ್ಯದ ಬಗ್ಗೆ;

(ಬಿ) ಅದು ಕಂಡುಬಂದ ಸ್ಥಳದ ಬಗ್ಗೆ;

(ಸಿ) ಕಂಡುಬಂದ ದಿನಾಂಕದ ಬಗ್ಗೆ

- ಬರಹದಲ್ಲಿ ನೋಟೀಸನ್ನು ಕೊಡತಕ್ಕದ್ದು ಮತ್ತು ಆ ನಿಧಿಯನ್ನು ಅತಿ ಸಮೀಪದ ಸರ್ಕಾರಿ ಖಜಾನೆಯಲ್ಲಿ ಇಡತಕ್ಕದ್ದು ಅಥವಾ ಆ ನಿಧಿಯನ್ನು, ಕಲೆಕ್ಟರನು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಕಾಲ ಮತ್ತು ಸ್ಥಳದಲ್ಲಿ ಹಾಜರುಪಡಿಸಲು, ಕಲೆಕ್ಟರನು ಸೂಕ್ತವೆಂದು ಯೋಚಿಸಬಹುದಾದಂಥ ಭದ್ರತೆಯನ್ನು ಕಲೆಕ್ಟರನಿಗೆ ಒದಗಿಸತಕ್ಕದ್ದು.

**5. ಹಾಜರಾಗಲು ಕ್ಲೇಮುದಾರರನ್ನು ಅಗತ್ಯಪಡಿಸುವ ಅಧಿಸೂಚನೆ.**- 4ನೇ ಪ್ರಕರಣದ ಮೇರೆಗೆ, ನೋಟೀಸನ್ನು ಸ್ವೀಕರಿಸಿದ ಮೇಲೆ, ಕಲೆಕ್ಟರನು ಸೂಕ್ತವೆಂದು ಯೋಚಿಸಬಹುದಾದಂಥ ವಿಚಾರಣೆ

(ಯಾವುದಾದರೂ ಇದ್ದರೆ) ಅದನ್ನು ಮಾಡಿದ ತರುವಾಯ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು, ಎಂದರೆ: -

(ಎ) ಅವನು ನಿಶ್ಚಿತ ದಿನಾಂಕದಂದು (ಅದನ್ನು ನಮೂದಿಸಿ), ನಿಶ್ಚಿತ ನಿಧಿಯು (ಅದರ ಸ್ವರೂಪ, ಮೊಬಲಗು ಮತ್ತು ಅಂದಾಜು ಮೌಲ್ಯವನ್ನು ನಮೂದಿಸಿ) ನಿಶ್ಚಿತ ಸ್ಥಳದಲ್ಲಿ (ಅದನ್ನು ನಮೂದಿಸಿ) ಕಂಡುಬಂದಿದೆ ಎಂದು ಮತ್ತು ಆ ನಿಧಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಕ್ಲೇಮು ಮಾಡುವ ಎಲ್ಲಾ ವ್ಯಕ್ತಿಗಳನ್ನು ಅಧಿಸೂಚನೆಯಲ್ಲಿ ನಮೂದು ಮಾಡಿದ ದಿವಸದಂದು, ಅಂಥ ದಿವಸವು ಅಂಥ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದ ತರುವಾಯ ನಾಲ್ಕು ತಿಂಗಳುಗಳಿಗಿಂತ ಮುಂಚಿನದಲ್ಲದ ಅಥವಾ ಆರು ತಿಂಗಳುಗಳಿಗಿಂತ ತರುವಾಯದ್ದಲ್ಲದ ಮತ್ತು ಅದರಲ್ಲಿ ನಮೂದಿಸಿದ ಸ್ಥಳದಲ್ಲಿ ಕಲೆಕ್ಟರನ ಮುಂದೆ ಖುದ್ದಾಗಿ ಅಥವಾ ಏಜೆಂಟನ ಮೂಲಕ ಹಾಜರಾಗಲು ಅಗತ್ಯಪಡಿಸಿ ಈ ಬಗ್ಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಿದ ರೀತಿಯಲ್ಲಿ ಅಧಿಸೂಚನೆಯನ್ನು ಪ್ರಕಟಿಸತಕ್ಕದ್ದು;

(ಬಿ) ಆ ನಿಧಿಯು ಕಂಡುಬಂದ ಸ್ಥಳವು, ಕಂಡುಬಂದ ದಿನಾಂಕದಂದು ಕಂಡವನನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಯ ಸ್ವಾಧೀನದಲ್ಲಿ ಇದ್ದಿತೆಂದು ಕಲೆಕ್ಟರನಿಗೆ ಕಂಡುಬಂದರೆ, ಕಲೆಕ್ಟರನು ಅದೇ ರೀತಿಯ ಬರಹದಲ್ಲಿನ ವಿಶೇಷ ನೋಟೀಸನ್ನು ಅಂಥ ವ್ಯಕ್ತಿಗೂ ಸಹ ಜಾರಿ ಮಾಡತಕ್ಕದ್ದು.

**6. ಹಾಜರಾಗಲು ತಪ್ಪಿದರೆ ಹಕ್ಕನ್ನು ಕಳೆದುಕೊಳ್ಳುವುದು.**- ನಿಧಿಯು ಕಂಡುಬಂದ ಂಥ ಸ್ಥಳದ ಒಡೆಯನೆಂದು ಅಥವಾ ಅನ್ಯಥಾ ಅಂಥ ನಿಧಿ ಅಥವಾ ಅದರ ಯಾವುದೇ ಭಾಗಕ್ಕೆ ಯಾವುದೇ ಹಕ್ಕನ್ನು ಹೊಂದಿರುವ ಮತ್ತು 5ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಮೂಲಕ ಅಗತ್ಯಪಡಿಸಿದಂತೆ ಹಾಜರಾಗದೇ ಇರುವ ಯಾರೇ ವ್ಯಕ್ತಿಯು ಅಂಥ ಹಕ್ಕನ್ನು ಕಳೆದುಕೊಳ್ಳತಕ್ಕದ್ದು.

**7. ಕಲೆಕ್ಟರನು ವಿಚಾರಣೆ ಮಾಡಬೇಕಾದ ಮತ್ತು ನಿರ್ಧರಿಸಬೇಕಾದ ವಿಷಯಗಳು.**- 5ನೇ ಪ್ರಕರಣದ ಮೇರೆಗೆ ಅಧಿಸೂಚಿಸಿದ ದಿವಸದಂದು, ಕಲೆಕ್ಟರನು ತನ್ನ ಮುಂದೆ ನಿಧಿಯನ್ನು ಹಾಜರುಪಡಿಸುವಂತೆ ಮಾಡತಕ್ಕದ್ದು, ಮತ್ತು-

(ಎ) ಅಂಥ ನಿಧಿಯನ್ನು ಯಾವ ವ್ಯಕ್ತಿಯು ಕಂಡನೋ ಆ ವ್ಯಕ್ತಿ, ಅದು ಯಾವ ಸ್ಥಳದಲ್ಲಿ ಮತ್ತು ಯಾವ ಸಂದರ್ಭಗಳಲ್ಲಿ ಕಂಡುಬಂದಿತೋ ಆ ಸ್ಥಳ ಮತ್ತು ಸಂದರ್ಭಗಳು; ಮತ್ತು

(ಬಿ) ಸಾಧ್ಯವಾಗುವಷ್ಟರ ಮಟ್ಟಿಗೆ ಅಂಥ ನಿಧಿಯನ್ನು ಯಾರು ಗುಪ್ತವಾಗಿಟ್ಟಿದ್ದನೋ ಆ ವ್ಯಕ್ತಿ ಮತ್ತು ಅದನ್ನು ಯಾವ ಸಂದರ್ಭಗಳಲ್ಲಿ ಗುಪ್ತವಾಗಿಡಲಾಗಿತ್ತೋ ಆ ಸಂದರ್ಭಗಳು

ಇವುಗಳ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ಅವುಗಳನ್ನು ನಿರ್ಧರಿಸತಕ್ಕದ್ದು.

**8. ಆ ನಿಧಿಯನ್ನು ಕ್ಲೇಮು ಮಾಡುವ ವ್ಯಕ್ತಿಗೆ ದಾವೆ ಹೂಡುವುದಕ್ಕಾಗಿ ಅವಕಾಶ ಮಾಡಿಕೊಡಬೇಕಾದ ಕಾಲ.**- 7ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ಮಾಡಿದ ತರುವಾಯ, ಕಲೆಕ್ಟರನಿಗೆ, ಸದರಿ ಅಧಿಸೂಚನೆಯ ಮೂಲಕ ಅಗತ್ಯಪಡಿಸಿದಂತೆ ಹಾಜರಾಗುವ ಮತ್ತು ಅಂಥ ನಿಧಿಯನ್ನು ಕ್ಲೇಮು ಮಾಡುವ ವ್ಯಕ್ತಿಯು ಅಥವಾ ಯಾವ ವ್ಯಕ್ತಿಯ ಅಧೀನದಲ್ಲಿ ಅಂಥ ವ್ಯಕ್ತಿಯು ಕ್ಲೇಮು ಮಾಡುವನೋ ಆ ಯಾರೇ ಇತರ ವ್ಯಕ್ತಿಗೆ ಆ ನಿಧಿಯು ಕಂಡುಬಂದ ದಿನಾಂಕಕ್ಕೆ ಮುಂಚೆ ಒಂದು ನೂರು ವರ್ಷಗಳೊಳಗೆ ಗುಪ್ತವಾಗಿಡಲಾಗಿತ್ತೆಂದು ನಂಬಲು ಕಾರಣವು ಕಂಡುಬಂದರೆ, ಕಲೆಕ್ಟರನು ಆ ಪ್ರಕರಣದ ಸುನಾವಣೆಯನ್ನು, ಕ್ಲೇಮುದಾರನು ಅವನ ಹಕ್ಕನ್ನು ಸ್ಥಾಪಿಸಲು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲು ಅವನು ಸಾಕಷ್ಟೆಂದು ಭಾವಿಸುವಂಥ ಅವಧಿಯವರೆಗೆ ಮುಂದೆ ಹಾಕುವ ಆದೇಶವನ್ನು ಮಾಡತಕ್ಕದ್ದು.

**9. ನಿಧಿಗೆ ಒಡೆಯನಿಲ್ಲವೆಂದು ಯಾವಾಗ ಘೋಷಿಸಬಹುದು.**- ಅಂಥ ವಿಚಾರಣೆಯನ್ನು ಮಾಡಿದ ಮೇಲೆ ಕಲೆಕ್ಟರನಿಗೆ ಆ ನಿಧಿಯನ್ನು ಹಾಗೆ ಗುಪ್ತವಾಗಿ ಇಡಲಾಗಿದೆಯೆಂದು ನಂಬಲು ಯಾವುದೇ ಕಾರಣವು ಕಂಡುಬರದಿದ್ದರೆ; ಅಥವಾ

8ನೇ ಪ್ರಕರಣದ ಮೇರೆಗೆ ಅವಧಿಯನ್ನು ನಿಗದಿಪಡಿಸಿರುವಲ್ಲಿ, ಕಲೆಕ್ಟರನಿಗೆ ತಿಳಿದಿರುವಷ್ಟರಮಟ್ಟಿಗೆ, ಹಿಂದೆ ಹೇಳಿದ ಅಂಥ ಅವಧಿಯೊಳಗೆ ಯಾವುದೇ ದಾವೆಯನ್ನು ಹೂಡಿಲ್ಲದಿದ್ದರೆ; ಅಥವಾ

ಅಂಥ ಅವಧಿಯೊಳಗೆ ಅಂಥ ದಾವೆಯನ್ನು ಹೂಡಿದ್ದು, ವಾದಿಯ ಕ್ಲೇಮನ್ನು ಅಂತಿಮವಾಗಿ ತಿರಸ್ಕರಿಸಿದ್ದರೆ;

ಕಲೆಕ್ಟರನು ಆ ನಿಧಿಗೆ ಒಡೆಯನಿಲ್ಲವೆಂಬುದಾಗಿ ಘೋಷಿಸಬಹುದು.

*ಅಂಥ ಘೋಷಣೆಯ ವಿರುದ್ಧ ಅಪೀಲು:*- ಈ ಪ್ರಕರಣದ ಮೇರೆಗೆ ಮಾಡಿದ ಘೋಷಣೆಯ ಮೂಲಕ ಬಾಧಿತನಾದ ಯಾರೇ ವ್ಯಕ್ತಿಯು, ಅದರ ದಿನಾಂಕದಿಂದ ಎರಡು ತಿಂಗಳುಗಳ ಒಳಗೆ ಅದರ ವಿರುದ್ಧ ಮುಖ್ಯ ನಿಯಂತ್ರಣ ರಾಜಸ್ವ ಪ್ರಾಧಿಕಾರಿಗೆ ಅಪೀಲನ್ನು ಮಾಡಿಕೊಳ್ಳಬಹುದು.

ಅಂಥ ಅಪೀಲಿಗೆ ಒಳಪಟ್ಟು, ಅಂಥ ಪ್ರತಿಯೊಂದು ಘೋಷಣೆಯು ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕದ್ದು.

**10. ಘೋಷಣೆಯ ತರುವಾಯದ ವ್ಯವಹರಣೆಗಳು.**- 9ನೇ ಪ್ರಕರಣದ ಮೇರೆಗೆ ಯಾವುದೇ ನಿಧಿಗೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಿರುವಾಗ ಅಂಥ ನಿಧಿಯನ್ನು, ಇಲ್ಲಿ ಇನ್ನುಮುಂದೆ ಒಳಗೊಂಡ ಉಪಬಂಧಗಳಿಗೆ ಅನುಸಾರವಾಗಿ ಅದನ್ನು ಕಂಡವನಿಗೆ ವಶಾವಣೆ ಮಾಡತಕ್ಕದ್ದು ಅಥವಾ ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವ ರೀತಿಯಲ್ಲಿ ಅವನ ಮತ್ತು ಅದು ಕಂಡುಬಂದ ಸ್ಥಳದ ಒಡೆಯನ ನಡುವೆ ಭಾಗ ಮಾಡತಕ್ಕದ್ದು.

**11. ಸ್ಥಳದ ಒಡೆಯನೆಂದು ಯಾರೇ ಇತರ ವ್ಯಕ್ತಿಯು ಕ್ಲೇಮು ಮಾಡದೆ ಇರುವಾಗ, ನಿಧಿಯನ್ನು ಕಂಡವನಿಗೆ ಕೊಡತಕ್ಕದ್ದು.**- ಹಿಂದೆ ಹೇಳಿದಂತೆ ಯಾವುದೇ ನಿಧಿಗೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಿರುವಾಗ ಮತ್ತು ಅಂಥ ನಿಧಿಯನ್ನು ಕಂಡವನನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಯು 5ನೇ ಪ್ರಕರಣದ ಮೇರೆಗೆ ಪ್ರಕಟಿಸಿದ ಅಧಿಸೂಚನೆಯ ಮೂಲಕ ಅಗತ್ಯಪಡಿಸಿದಂತೆ ಹಾಜರಿಲ್ಲದೇ ಇರುವಾಗ ಮತ್ತು ಅದು ಕಂಡುಬಂದ ಸ್ಥಳದ ಒಡೆಯನೆಂದು ನಿಧಿಯ ಪಾಲನ್ನು ಕ್ಲೇಮು ಮಾಡಿಲ್ಲದೇ ಇರುವಾಗ ಕಲೆಕ್ಟರನು ಅಂಥ ನಿಧಿಯನ್ನು ಕಂಡವನಿಗೆ ಅದನ್ನು ವಶಾವಣೆ ಮಾಡತಕ್ಕದ್ದು.

**12. ಅಂಥ ಒಬ್ಬನೇ ಒಬ್ಬ ವ್ಯಕ್ತಿಯು ಕ್ಲೇಮು ಮಾಡಿದಾಗ, ಮತ್ತು ಅವನ ಕ್ಲೇಮಿನ ಬಗ್ಗೆ ವಿವಾದವಿಲ್ಲದಿದ್ದಾಗ ನಿಧಿಯನ್ನು ಭಾಗ ಮಾಡುವುದು ಮತ್ತು ಭಾಗಗಳನ್ನು ಪಕ್ಷಕಾರರಿಗೆ ವಶಾವಣೆ ಮಾಡುವುದು.**- ಯಾವುದೇ ನಿಧಿಗೆ ಸಂಬಂಧಿಸಿದಂತೆ ಹಿಂದೆ ಹೇಳಿದಂತೆ ಘೋಷಣೆಯನ್ನು ಮಾಡಿರುವಾಗ ಮತ್ತು ಅಂಥ ನಿಧಿಯನ್ನು ಕಂಡವನನ್ನು ಹೊರತುಪಡಿಸಿ, ಒಬ್ಬನೇ ಒಬ್ಬ ವ್ಯಕ್ತಿಯು ಹಾಗೆ ಹಾಜರಾದಾಗ ಮತ್ತು ಕಂಡವನು ಅಂಥ ವ್ಯಕ್ತಿಯ ಕ್ಲೇಮಿನ ಬಗ್ಗೆ ವಿವಾದ ಮಾಡದೇ ಇರುವಾಗ, ಕಲೆಕ್ಟರನು ಈ ಕೆಳಕಂಡ ನಿಯಮಕ್ಕೆ ಅನುಸಾರವಾಗಿ ಕಂಡವನ ಮತ್ತು ಹಾಗೆ ಕ್ಲೇಮು ಮಾಡುವ ವ್ಯಕ್ತಿಯ ನಡುವೆ ಆ ನಿಧಿಯನ್ನು ಭಾಗ ಮಾಡಲು ಕ್ರಮ ಪ್ರಾರಂಭಿಸತಕ್ಕದ್ದು, ಎಂದರೆ:

ಆ ನಿಧಿಯ ವಿಲೆಯ ಬಗ್ಗೆ ಕಂಡವನು ಮತ್ತು ಹಾಗೆ ಕ್ಲೇಮು ಮಾಡುವ ವ್ಯಕ್ತಿಯು ಆಗ ಜಾರಿಯಲ್ಲಿದ್ದ ಯಾವುದೇ ಒಪ್ಪಂದವನ್ನು ಮಾಡಿಕೊಂಡಿಲ್ಲದಿದ್ದರೆ, ಆ ನಿಧಿಯ ನಾಲ್ಕನೇ ಮೂರರಷ್ಟನ್ನು ಅಂಥ ಕಂಡವನಿಗೆ ಮತ್ತು ಉಳಿದಿರುವುದನ್ನು ಅಂಥ ವ್ಯಕ್ತಿಗೆ ಹಂಚತಕ್ಕದ್ದು. ಕಂಡವನು ಮತ್ತು ಅಂಥ ವ್ಯಕ್ತಿಯು ಯಾವುದೇ ಅಂಥ ಒಪ್ಪಂದವನ್ನು ಮಾಡಿಕೊಂಡಿದ್ದರೆ ಆ ನಿಧಿಯನ್ನು ಅದಕ್ಕೆ ಅನುಸಾರವಾಗಿ ವಿಲೆ ಮಾಡತಕ್ಕದ್ದು:

ಪರಂತು, ಕಲೆಕ್ಟರನು ಯಾವುದೇ ಪ್ರಕರಣದಲ್ಲಿ ಅವನು ಸೂಕ್ತವೆಂದು ಯೋಚಿಸಿದರೆ ಈ ಪ್ರಕರಣದ ಮೂಲಕ ನಿರ್ದೇಶಿಸಿದಂತೆ ಯಾವುದೇ ನಿಧಿಯನ್ನು ಭಾಗ ಮಾಡುವುದಕ್ಕೆ ಬದಲಾಗಿ,-

(ಎ) ಅಂಥ ಪಕ್ಷಕಾರನು, ಆ ಇನ್ನೊಬ್ಬ ಪಕ್ಷಕಾರನಿಗಾಗಿ ಸಂದರ್ಭಾನುಸಾರ, ಅಂಥ ಇನ್ನೊಬ್ಬ ಪಕ್ಷಕಾರನ ಪಾಲಿಗೆ ಸಮಾನವಾದಂಥ ಅಥವಾ ಹಾಗೆ ಹಂಚಿದುದಕ್ಕಿಂತ ಹೆಚ್ಚಿನದಾದ ಮತ್ತು ಕಲೆಕ್ಟರನು ನಿಗದಿ ಮಾಡಬಹುದಾದಂಥ ಹಣವನ್ನು ಕಲೆಕ್ಟರನಿಗೆ ಸಂದಾಯ ಮಾಡಿದ ಮೇಲೆ, ಅಂಥ ನಿಧಿಯಲ್ಲಿ ಅವನ ಪೂರ್ಣಪಾಲನ್ನು ಅಥವಾ ಅದಕ್ಕಿಂತ ಹೆಚ್ಚಿನದನ್ನು ಯಾವನೇ ಪಕ್ಷಕಾರನಿಗೆ ಹಂಚಬಹುದು; ಅಥವಾ

(ಬಿ) ಅಂಥ ನಿಧಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಬಹುದು ಮತ್ತು ಆ ಮಾರಾಟದ ಉತ್ಪತ್ತಿಯನ್ನು ಇದರಲ್ಲಿ ಈ ಮುಂಚೆ ನಿಯಮಿಸಿದ ನಿಯಮಕ್ಕೆ ಅನುಸಾರವಾಗಿ ಪಕ್ಷಕಾರರ ನಡುವೆ ಭಾಗ ಮಾಡಬಹುದು.

ಇದೂ ಅಲ್ಲದೆ, ಕಲೆಕ್ಟರನು ಸದರಿ ಕಂಡವನನ್ನು ಅಥವಾ ಆ ನಿಧಿಯು ಕಂಡುಬಂದಂಥ ಸ್ಥಳದ ಒಡೆಯನೆಂದು ಕ್ಲೇಮು ಮಾಡುವ ವ್ಯಕ್ತಿಯನ್ನು ಹೊರತುಪಡಿಸಿ, ಇತರ ಯಾವನೇ ವ್ಯಕ್ತಿಯು ಈ

ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕ್ಲೇಮನ್ನು 9ನೇ ಪ್ರಕರಣದ ಮೇರೆಗಿನ ಅವನ ಘೋಷಣೆಯ ಮೂಲಕ ತಿರಸ್ಕರಿಸಿದಾಗ, ಅಂಥ ವಿಭಜನೆಯನ್ನು, ಯಾರ ಕ್ಲೇಮನ್ನು ಹಾಗೆ ತಿರಸ್ಕರಿಸಲಾಯಿತೋ ಆ ವ್ಯಕ್ತಿಯು 9ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸದೇ ಇದ್ದರೆ, ಅಥವಾ ಅಪೀಲನ್ನು ಹಾಗೆ ಸಲ್ಲಿಸಲಾಗಿದ್ದರೆ ಅಂಥ ಅಪೀಲನ್ನು ವಜಾ ಮಾಡಿದ ತರುವಾಯ, ಎರಡು ತಿಂಗಳುಗಳು ಮುಕ್ತಾಯವಾಗುವವರೆಗೆ ಮಾಡತಕ್ಕದ್ದಲ್ಲ.

ಕಲೆಕ್ಟರನು ಈ ಪ್ರಕರಣದ ಮೇರೆಗೆ ಭಾಗವನ್ನು ಮಾಡಿದಾಗ, ಅಂಥ ನಿಧಿಯ ಭಾಗಗಳನ್ನು ಅಥವಾ ಅದಕ್ಕೆ ಬದಲಾಗಿ ಅಂಥ ಭಾಗವನ್ನು ಮಾಡುವುದರ ಮೇರೆಗೆ ಪಕ್ಷಕಾರರು ಅನುಕ್ರಮವಾಗಿ ಹಕ್ಕುಳ್ಳವರಾಗುವಂಥ ಹಣವನ್ನು ಅವರಿಗೆ ವಶಾವಣೆ ಮಾಡತಕ್ಕದ್ದು.

**13. ಸ್ಥಳದ ಒಡೆತನದ ಬಗ್ಗೆ ವಿವಾದದ ಸಂದರ್ಭದಲ್ಲಿ, ವ್ಯವಹರಣೆಗಳನ್ನು ತಡೆಹಿಡಿಯುವುದು.–** ಯಾವುದೇ ನಿಧಿಗೆ ಸಂಬಂಧಿಸಿದಂತೆ ಹಿಂದೆ ಹೇಳಿದಂತೆ ಘೋಷಣೆಯನ್ನು ಮಾಡಿರುವಾಗ ಮತ್ತು ಇಬ್ಬರು ಮತ್ತು ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಹಿಂದೆ ಹೇಳಿದಂತೆ ಹಾಜರಾದಾಗ ಮತ್ತು ಅವರಲ್ಲಿ ಪ್ರತಿಯೊಬ್ಬನು ನಿಧಿಯು ಕಂಡುಬಂದ ಸ್ಥಳದ ಒಡೆಯನೆಂದು ಕ್ಲೇಮು ಮಾಡಿದಾಗ ಅಥವಾ ಹಾಗೆ ಹಾಜರಾದ ಮತ್ತು ಕ್ಲೇಮು ಮಾಡಿದ ಯಾರೇ ವ್ಯಕ್ತಿಯ ಹಕ್ಕಿನ ಬಗ್ಗೆ ಅಂಥ ನಿಧಿಯನ್ನು ಕಂಡವನು ವಿವಾದವನ್ನು ಎತ್ತಿದಾಗ ಕಲೆಕ್ಟರನು ಅಂಥ ನಿಧಿಯನ್ನು ಉಳಿಸಿಕೊಳ್ಳತಕ್ಕದ್ದು ಮತ್ತು ಆ ವಿಷಯದ ಬಗ್ಗೆ ಸಿವಿಲ್ ನ್ಯಾಯಾಲಯವು ವಿಚಾರಣೆ ಮಾಡುವ ಮತ್ತು ಅದನ್ನು ನಿರ್ಧರಿಸುವ ದೃಷ್ಟಿಯಿಂದ ತನ್ನ ವ್ಯವಹರಣೆಗಳನ್ನು ತಡೆಹಿಡಿದು ಆದೇಶವನ್ನು ಮಾಡತಕ್ಕದ್ದು.

**14. ಅಂಥ ವಿವಾದದ ಇತ್ಯರ್ಥ.–** ಹಾಗೆ ಹಾಜರಾಗಿರುವ ಮತ್ತು ಕ್ಲೇಮು ಮಾಡಿರುವ ಯಾರೇ ವ್ಯಕ್ತಿಯು ಅಂಥ ಆದೇಶದ ದಿನಾಂಕದಿಂದ ಒಂದು ತಿಂಗಳೊಳಗೆ ಅವನ ಹಕ್ಕನ್ನು ಘೋಷಿಸುವ ಡಿಕ್ರಿಯನ್ನು ಪಡೆಯಲು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಬಹುದು, ಮತ್ತು ಅಂಥ ಪ್ರತಿಯೊಂದು ದಾವೆಯಲ್ಲಿ ಆ ನಿಧಿಯನ್ನು ಕಂಡವನನ್ನು ಮತ್ತು ಕಲೆಕ್ಟರನ ಮುಂದೆ ಅಂಥ ಕ್ಲೇಮಿನ ಬಗ್ಗೆ ವಿವಾದವನ್ನು ಎತ್ತುವ ಎಲ್ಲಾ ವ್ಯಕ್ತಿಗಳನ್ನು ಪ್ರತಿವಾದಿಗಳನ್ನಾಗಿ ಮಾಡತಕ್ಕದ್ದು.

**15. ಆ ತರುವಾಯ ವಿಭಜನೆ.–** ಯಾವುದೇ ಅಂಥ ದಾವೆಯನ್ನು ಹೂಡಿದರೆ ಮತ್ತು ಅದರಲ್ಲಿ ವಾದಿಯ ಕ್ಲೇಮು ಅಂತಿಮವಾಗಿ ಸ್ಥಾಪಿತವಾದರೆ, ಕಲೆಕ್ಟರನು, 12ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಅವನ ಮತ್ತು ಕಂಡವನ ನಡುವೆ ಆ ನಿಧಿಯನ್ನು ಭಾಗ ಮಾಡತಕ್ಕದ್ದು.

ಹಿಂದೆ ಹೇಳಿದಂತೆ ಯಾವುದೇ ಅಂಥ ದಾವೆಯನ್ನು ಹೂಡದಿದ್ದರೆ, ಅಥವಾ ಅಂಥ ಎಲ್ಲಾ ದಾವೆಗಳಲ್ಲಿ ವಾದಿಗಳ ಕ್ಲೇಮುಗಳನ್ನು ಅಂತಿಮವಾಗಿ ತಿರಸ್ಕರಿಸಲಾಗಿದ್ದರೆ, ಕಲೆಕ್ಟರನು ಆ ನಿಧಿಯನ್ನು ಕಂಡವನಿಗೆ ವಶಾವಣೆ ಮಾಡತಕ್ಕದ್ದು.

**16. ಸರ್ಕಾರದ ಪರವಾಗಿ ಆ ನಿಧಿಯನ್ನು ಆರ್ಜಿಸುವ ಅಧಿಕಾರ.–** ಕಲೆಕ್ಟರನು, 9ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದ ತರುವಾಯ ಮತ್ತು ಇದರಲ್ಲಿ ಈ ಮುಂಚೆ ಉಪಬಂಧಿಸಿದಂತೆ ಆ ನಿಧಿಯನ್ನು ವಶಾವಣೆ ಮಾಡುವುದಕ್ಕೆ ಅಥವಾ ಭಾಗ ಮಾಡುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಆ ನಿಧಿ ಅಥವಾ ಅದರ ನಿರ್ದಿಷ್ಟಪಡಿಸಿದ ಯಾವುವೇ ಭಾಗವನ್ನು, ಅಂಥ ಮೌಲ್ಯದ 1/5 ರಷ್ಟರ ಜೊತೆಗೆ ಅಂಥ ನಿಧಿ ಅಥವಾ ಅದರ ಭಾಗದ ಸಾಮಗ್ರಿಗಳ ಮೌಲ್ಯಕ್ಕೆ ಸಮನಾದ ಮೊತ್ತವನ್ನು ಹಕ್ಕುಳ್ಳವರಾದ ವ್ಯಕ್ತಿಗಳಿಗೆ ಸಂದಾಯ ಮಾಡುವ ಮೂಲಕ ಸರ್ಕಾರದ ಪರವಾಗಿ ಆರ್ಜಿಸುವ ತನ್ನ ಉದ್ದೇಶದ ಬಗ್ಗೆ ತನ್ನ ಸಹಿ ಹಾಕಿ ಲಿಖಿತ ಘೋಷಣೆ ಮಾಡಬಹುದು ಮತ್ತು ಅಂಥ ಮೊತ್ತವನ್ನು, ಅಂಥ ವ್ಯಕ್ತಿಗಳ ಜಮೆಗೆ ಅವನ ಖಜಾನೆಯಲ್ಲಿ ಠೇವಣಿ ಇಡಬಹುದು; ಮತ್ತು ಆ ತರುವಾಯ ಅಂಥ ನಿಧಿ ಅಥವಾ ಅದರ ಭಾಗವನ್ನು ಸರ್ಕಾರದ ಸ್ವತ್ತೆಂಬುದಾಗಿ ಭಾವಿಸತಕ್ಕದ್ದು ಮತ್ತು ಹಾಗೆ ಠೇವಣಿ ಇಟ್ಟ ಆ ಹಣವು ಅಂಥ ನಿಧಿ ಅಥವಾ ಅದರ ಭಾಗವಾಗಿದ್ದಿದ್ದರೆ ಹೇಗೋ ಹಾಗೆ ಆ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ವ್ಯವಹರಿಸತಕ್ಕದ್ದು.

**17. ಕಲೆಕ್ಟರನ ತೀರ್ಮಾನವು ಅಂತಿಮವಾಗಿರುವುದು ಮತ್ತು ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ಅವನ ವಿರುದ್ಧ ಯಾವುದೇ ದಾವೆಯನ್ನು ಹೂಡಲು ಅವಕಾಶವಿಲ್ಲದಿರುವುದು.–** ಈ ಅಧಿನಿಯಮದ ಮೇರೆಗೆ ಕಲೆಕ್ಟರನು ಕೊಟ್ಟ ಯಾವುದೇ ತೀರ್ಮಾನ ಅಥವಾ ಮಾಡಿದ ಯಾವುದೇ

ಕಾರ್ಯವನ್ನು ಯಾವುದೇ ಸಿವಿಲ್ ನ್ಯಾಯಾಲಯವು ಪ್ರಶ್ನಿಸತಕ್ಕದ್ದಲ್ಲ ಮತ್ತು ಈ ಮೂಲಕ ಅವನಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವಲ್ಲಿ ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯಕ್ಕಾಗಿ ಅವನ ವಿರುದ್ಧ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**18. ಕಲೆಕ್ಟರನು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವುದು.**- ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯನ್ನು ಮಾಡುವ ಕಲೆಕ್ಟರನು ದಾವೆಗಳ ಅಧಿವಿಚಾರಣೆಗಾಗಿ ಸಿವಿಲ್ ನ್ಯಾಯಾಲಯಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆ (1882ರ 14)ಯ ಮೂಲಕ ಪ್ರದಾನ ಮಾಡಲಾದಂಥ ಯಾವುದೇ ಅಧಿಕಾರವನ್ನು ಚಲಾಯಿಸಬಹುದು.

**19. ನಿಯಮ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳನ್ನು ನಿಯಂತ್ರಿಸಲು ಅದಕ್ಕೆ ಸುಸಂಗತವಾದ ನಿಯಮಗಳನ್ನು ಕಾಲಕಾಲಕ್ಕೆ ರಚಿಸಬಹುದು.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯವಿಧಾನ ಮಂಡಲದ ಮುಂದೆ ಇಡತಕ್ಕದ್ದು.

ಅಂಥ ನಿಯಮಗಳು, ರಾಜಪತ್ರದಲ್ಲಿ ಪ್ರಕಟವಾದ ಮೇಲೆ ಕಾನೂನಿನ ಬಲವನ್ನು ಹೊಂದಿರತಕ್ಕದ್ದು.

## ದಂಡನೆಗಳು

**20 ನೋಟೀಸನ್ನು ಕೊಡಲು ತಪ್ಪುವ ಕಂಡವನಿಗೆ ದಂಡನೆ, ಇತ್ಯಾದಿ.**- ಯಾವುದೇ ನಿಧಿಯನ್ನು ಕಂಡವನು 4ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ನೋಟೀಸನ್ನು ಕೊಡಲು ತಪ್ಪಿದರೆ ಅಥವಾ ಠೇವಣಿಯನ್ನು ಇಡದಿದ್ದರೆ ಅಥವಾ ಭದ್ರತೆಯನ್ನು ಒದಗಿಸದಿದ್ದರೆ, ಅಥವಾ ನಿಧಿಯ ಗುರುತನ್ನು ಮರೆಮಾಚುವ ಹಾಗೆ ಅದನ್ನು ಬದಲಾಯಿಸಿದರೆ ಅಥವಾ ಬದಲಾಯಿಸಲು ಪ್ರಯತ್ನಿಸಿದರೆ, ಅವನು ಅನ್ಯಥಾ ಹಕ್ಕುದಾರನಾಗಬಹುದಾದ ಅಂಥ ನಿಧಿಯ ಪಾಲು ಅಥವಾ ಅದಕ್ಕೆ ಬದಲಾಗಿ ಹಣವು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

ಮತ್ತು ಮ್ಯಾಜಿಸ್ಟ್ರೇಟನ ಮುಂದೆ ಅಪರಾಧವು ನಿರ್ಣಯವಾದ ಮೇಲೆ ಅವನು ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**21. 20ನೇ ಪ್ರಕರಣದ ಮೇರೆಗಿನ ಅಪರಾಧವನ್ನು ದುಷ್ಪ್ರೇರಿಸುವ ಒಡೆಯನಿಗೆ ದಂಡನೆ.**- ಯಾವುದೇ ನಿಧಿಯು ಕಂಡುಬಂದಂಥ ಸ್ಥಳದ ಒಡೆಯನು, 20ನೇ ಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು, ಭಾರತ ದಂಡ ಸಂಹಿತೆ (1860ರ 45)ಯ ಅರ್ಥವ್ಯಾಪ್ತಿಯೊಳಗೆ ದುಷ್ಪ್ರೇರಿಸಿದರೆ, ಅವನು ಅನ್ಯಥಾ ಹಕ್ಕುದಾರನಾಗಬಹುದಾದ ಅಂಥ ನಿಧಿಯ ಪಾಲು ಅಥವಾ ಅದಕ್ಕೆ ಬದಲಾಗಿ ಇರುವ ಹಣವು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

ಮತ್ತು ಮ್ಯಾಜಿಸ್ಟ್ರೇಟನ ಮುಂದೆ ಅಪರಾಧವು ನಿರ್ಣಯವಾದ ಮೇಲೆ, ಅವನು ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**ಅನುಸೂಚಿ.**- ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1891 (1891ರ 12)ರ 2ನೇ ಪ್ರಕರಣ ಮತ್ತು 1ನೇ ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

* * * * *